# ನಾಗಚಂದ್ರನ ಪಂಪರಾಮಾಯಣದಲ್ಲಿ 'ಲಕ್ಷ್ಮಣ'

**ಉಮಾಶಂಕರ ಓ. ಎಂ.**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಚಿಕ್ಕಮಗಳೂರು.

**Received: 04-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724671**

**ABSTRACT:**

ಕಾವ್ಯದ ಪಾತ್ರಗಳನ್ನು ಸಮಾಜಮುಖಿಯಾಗಿಸುವುದು ಕವಿಯ ಸಾಮಾಜಿಕ ಕಾಳಜಿಯ ಪ್ರತೀಕವಾಗಿದೆ. ಇಂತಹ ಪಲ್ಲಟಾತ್ಮಕ ಚಿಂತನೆಯನ್ನು ಭಾರತದ ವಿವಿಧ ಬುಡಕಟ್ಟುಗಳ ರಾಮಾಯಣ-ಮಹಾಭಾರತದ ಕಥೆಗಳಲ್ಲಿ ಕಾಣುವಂತೆ ನಾಗಚಂದ್ರನ ರಾಮಚಂದ್ರಚರಿತ ಪುರಾಣಂನಲ್ಲೂ ಕಾಣಬಹುದಾಗಿದೆ. ನಾಗಚಂದ್ರನ ಮಾತುಗಾರಿಕೆ, ಮನುಷ್ಯ ಸ್ವಭಾವದ ಪರಿಚಯ, ಶ್ರೇಷ್ಠ ರೀತಿಯ ಪಾತ್ರ ಚಿತ್ರಣ ಇವುಗಳು ಉನ್ನತ ಮಟ್ಟದವು. ಈ ಕಾವ್ಯವು ರಾಮಕೇಂದ್ರಿತ ಕಥನವೇ ಆದರೂ ಪೂರ್ಣಕಾವ್ಯವನ್ನು ಲಕ್ಷಿಸಿದಾಗ ಲಕ್ಷ್ಮಣನು ಅನುನಾಯಕ ಅಥವಾ ಉಪನಾಯಕ ಎನ್ನುವುದಕ್ಕಿಂತ 'ನಾಯಕನೇ ಹೌದು' ಎಂಬಂತೆ ಕಾವ್ಯಾಭ್ಯಾಸಕರಿಗೆ ಕಾಣುತ್ತಾನೆ. ಕಾವ್ಯದ ಉದ್ದಕ್ಕೂ ಕಾಣುವ ಕಾರ್ಯೋತ್ಸುಕತೆಯೂ ಪೌರುಷವು ಲಕ್ಷ್ಮಣನದು. ಲಕ್ಷ್ಮಣನು ಕಥಾನಾಯಕನಲ್ಲ. ಆದರೆ ಕಥೆಯ ಉದ್ದಕ್ಕೂ ಪಾತ್ರವಹಿಸಿದ್ದಾನೆ. ರಾಮನು ಪಿತೃವಚನ ಪರಿಪಾಲಕನೆನಿಸಿಕೊಂಡರೆ ನಾಗಚಂದ್ರನ ಲಕ್ಷ್ಮಣನು ಮಾತೃ ವಚನ ಪರಿಪಾಲಕ ಎನಿಸಿಕೊಳ್ಳುವನು. ಸೀತೆಯಲ್ಲಿ ಮಾತೆಯನ್ನು ಕಂಡ ಲಕ್ಷ್ಮಣನು ಆಕೆಯನ್ನು ಅಡವಿಗಟ್ಟುವ ರಾಮನ ನಿಷ್ಕರುಣೆಯ ನಿರ್ಧಾರವನ್ನು ಪ್ರತಿರೋಧಿಸುವ ಮೂಲಕ ಅಣ್ಣನ ಮಾತಿನ ಅಂಧಾನುಪಾಲಕನಲ್ಲ ವಿವೇಚನೆಯುಳ್ಳವನು ಎಂಬಂತೆ ನಡೆದುಕೊಂಡನು. ವನವಾಸದುದ್ದಕ್ಕೂ ಯುದ್ಧ ಸನ್ನಿವೇಶಗಳು ನಿಯಮಿತವಾಗಿ ಅವರ್ತವಾಗಿವೆ. ಇಲ್ಲಿ ಲಕ್ಷ್ಮಣನ ಕ್ಷಾತ್ರತನ ಪ್ರತಾಪವು ರಾಮನನ್ನು ನೇಪಥ್ಯಕ್ಕೆ ಸರಿಸುವಂತಿವೆ. ರಾಮನ ಜೀವನದುದ್ದಕ್ಕೂ ಲಕ್ಷ್ಮಣನು ಅತಿ ಸಮೀಪಾವರ್ತಿಯಾಗಿದ್ದನು. ಅದು ರಾಮನ ಯುದ್ಧ, ವಿವಾಹ, ವನವಾಸ, ವಿಜೃಂಭಣೆ ಮಾತ್ರವಲ್ಲದೆ ವಿರಹ-ವಿಯೋಗಗಳ ಸನ್ನಿವೇಶದಲ್ಲೂ ಲಕ್ಷ್ಮಣನೇ ಜೊತೆಗಿದ್ದನು. ಆದ್ದರಿಂದ ಲಕ್ಷ್ಮಣನಿಲ್ಲದ ಶೂನ್ಯತೆಯನ್ನು ಸಹಿಸಕೊಳ್ಳಲಾಗದೆ ರಾಮನು ಚಿತ್ತಭ್ರಮಣೆಗೊಂಡನು. ಒಟ್ಟಾರೆ, ವಂಶಗೌರವ ರಕ್ಷಿಸುವಲ್ಲಿ, ಭ್ರಾತೃತ್ವದಲ್ಲಿ ಹಾಗೂ ಕ್ಷಾತ್ರಗುಣದಲ್ಲಿ ಲಕ್ಷ್ಮಣನು ಒಂದು ಮಾದರಿಯೇ ಆಗಿದ್ದಾನೆ. ವೀರಾವೇಶವು ಸದಾ ಶಿಖರ ಮುಖಿಯಾಗಿರುವಂತೆ ಸಂತಾಪ-ಸಮಾದಾನ ಮತ್ತು ಪಾಪಪ್ರಜ್ಞೆಗಳು ಸಮಪಾತಳಿಯಲ್ಲಿ ಅಭಿವ್ಯಕ್ತಗೊಂಡಿವೆ. ಆದ್ದರಿಂದ, ನಾಗಚಂದ್ರನ ಪಂಪರಾಮಾಯಣವು ಜೈನ ಪರಿಕಲ್ಪನೆಯಂತೆ 'ವಾಸುದೇವ-ಪ್ರತಿವಾಸುದೇವ' ಕೇಂದ್ರಿತವಾಗಿರುವುದರಿಂದ ಇದು ರಾಮ-ಲಕ್ಷ್ಮಣರ ನಾಯಕತ್ವದ, ರಾವಣನ ಪ್ರತಿನಾಯಕತ್ವದ ಗುಣಾವಗುಣಗಳನ್ನು ಮಥಿಸುವ ಕಥೆಯಂತೆ ಕಾಣುತ್ತದೆ. ಇದನ್ನು ಕಥೆಯ ಸನ್ನಿವೇಶಗಳು ಪುರಾವೆಗೊಳಿಸುತ್ತವೆ.

**KEYWORDS:**

ಪಉಮಚರಿಯ, ವಜ್ರಾವರ್ತ, ಸಾಗರಾವರ್ತ, ಪ್ರತಿವಾಸುದೇವ, ಸೂರ್ಯಹಾಸ, ಸಿದ್ಧಶೈಲ, ಗೊಂಡರು.

ಸಾಹಿತ್ಯ ಸೃಜನೆಯ ಹಿಂದೆ ವಿಭಿನ್ನ ಆಯಾಮಗಳಿರುತ್ತವೆ. ನಮ್ಮ ಪ್ರಾಚೀನ ಕನ್ನಡ ಸಾಹಿತಿಗಳು ಆಶ್ರಯದ ಋಣಕ್ಕಾಗಿ, ನಂಬಿದ ದೈವ-ಧರ್ಮಗಳ ಪ್ರಚಾರ ಮತ್ತು ಸ್ತುತಿಗಾಗಿ, ವಿದ್ವತ್ತಿಗಾಗಿ ಹಾಗೂ ತಮ್ಮ ಮನಃಸಂತೋಷಕ್ಕಾಗಿ ಸಾಹಿತ್ಯವನ್ನು ಸೃಜಿಸಿದ್ದಾರೆ. ಇಲ್ಲಿನ ಬಹುತೇಕ ಕಾವ್ಯಗಳಲ್ಲಿ ದೈವ, ಪುರಾಣ ಅಥವಾ ಐತಿಹಾಸಿಕ ವ್ಯಕ್ತಿಯು ನಾಯಕನಾಗಿ, ಆತನನ್ನು ಉಳಿದ ಪಾತ್ರಗಳು ಪೋಷಿಸಲ್ಪಡುವ ಸರಳ ರೇಖಾತ್ಮಕ ನಿಯಮ ಪಾಲನೆಯಾಗಿದೆ ಎನಿಸುತ್ತದೆ. ಆದರೆ ಕೆಲವು ಕವಿಗಳು ಈ ಚೌಕಟ್ಟಿನೊಳಗೂ ಸಹ ಸಾಮಾಜಿಕ ಸಂಗತಿಗಳನ್ನು ಲಕ್ಷಿಸಿ, ಅವುಗಳನ್ನು ತಮ್ಮ ಕಾವ್ಯದ ಪಾತ್ರ ಮತ್ತು ಸನ್ನಿವೇಶಗಳ ಮೂಲಕ ಚಿಂತಿಸಿ ಸಾಮಾಜಿಕ ಕಾಳಜಿಯನ್ನು ಅಭಿವ್ಯಕ್ತಿಸಿದ್ದಾರೆ. ಇಂತಹ ಕವಿಗಳ ಸಾಮಾಜಿಕ ಕಾಳಜಿಯ ಒಳತುಡಿತದ ಕಾರಣವಾಗಿ ಕಥಾನಾಯಕನ ಸ್ಥಾನಕ್ಕೆ ಸಮಾಂತರವಾಗಿ ಮತ್ತೊಂದು ಪ್ರಮುಖ ಪಾತ್ರವನ್ನು ತಂದಿದ್ದಾರೆ. ಇಂತಹ ನಿದರ್ಶನಗಳಿಗೆ ಪಂಪನ 'ವಿಕ್ರಮಾರ್ಜುನ ವಿಜಯಂ'ನಲ್ಲಿ ಅರ್ಜುನನಿಗೆ ಸಮಾನಾಂತರವಾಗಿ ಕರ್ಣನನ್ನು (ಕೆಲವೊಮ್ಮೆ ದುರ್ಯೋಧನನನ್ನೂ), ರನ್ನನ 'ಗದಾಯುದ್ಧಂ'ನಲ್ಲಿ ಭೀಮನಿಗೆ ಸಮಾಂತರವಾಗಿ ದುರ್ಯೋಧನನನ್ನು ನಾಗಚಂದ್ರನ 'ರಾಮಚಂದ್ರಚರಿತ ಪುರಾಣಂ'ನಲ್ಲಿ ರಾಮನಿಗೆ ಸಮಾಂತರವಾಗಿ ರಾವಣನನ್ನು ತಂದಿರುವುದನ್ನು ಗಮನಿಸಬಹುದು. ಇಂತಹ ಬದಲಾವಣೆಯ ಮೂಲಕ ತಮ್ಮ ಕಾಲದ ಸಾಮಾಜಿಕ ವಿಷಮ ಸಂಗತಿಗಳನ್ನು ತರ್ಕಿಸುವ, ಪ್ರತಿರೋಧಿಸುವ ಹಾಗೂ ನ್ಯಾಯ ಪ್ರತಿಪಾದಿಸುವ ಆಲೋಚನೆಗಳನ್ನು ನಾಯಕೇತರ ಪಾತ್ರಗಳ ಮೂಲಕವೂ ಮಾಡಿಸಿದ್ದಾರೆ. ಅಂತಹ ಪಾತ್ರಗಳ ಮೂಲಕ ನಾಯಕತ್ವದ ಗುಣಗಳನ್ನು ಇತರ ಪಾತ್ರಗಳಲ್ಲೂ ಕಾಣುವ ಮತ್ತು ಕಟ್ಟುವ ಸಾಮಾಜಿಕ ಹೊಣೆಗಾರಿಕೆ ತೋರಿದ್ದಾರೆ.

ಜೈನ ಪರಂಪರೆಯ ಕೃತಿಗಳಾದ ಪ್ರಾಕೃತದಲ್ಲಿ ವಿಮಲಸೂರಿಯ 'ಪಉಮಚರಿಯ' ಹಾಗೂ ಸಂಸ್ಕೃತದಲ್ಲಿ ರವಿಷೇಣನ 'ಪದ್ಮಪುರಾಣ'ವನ್ನು ಮೂಲವಾಗಿಸಿಕೊಂಡು ಎರಡು ಕಾವ್ಯಗಳಿಂದಲೂ ಹದವರಿತು ಕಾವ್ಯಸತ್ವ ಸ್ವೀಕರಿಸಿ ಕನ್ನಡದ ಮೊದಲ 'ಜೈನ ರಾಮಾಯಣವನ್ನು' ರಚಿಸಿದ ಹೆಗ್ಗಳಿಕೆ ನಾಗಚಂದ್ರನಿಗೆ ಸಲ್ಲುತ್ತದೆ. ಹೀಗೆ, ದೇವಾಲಯವನ್ನು ಕಟ್ಟುವ ಶಿಲ್ಪಿ, ಸ್ತಂಭ, ಭಿತ್ತಿ, ದ್ವಾರ, ಮಂಟಪಗಳನ್ನು ಔಚಿತ್ಯದಿಂದ ಗಾತ್ರ ಪಾತ್ರಗಳಿಗೆ ತಕ್ಕಂತೆ ಕೆತ್ತುವಂತೆ ನಾಗಚಂದ್ರನು ರಾಮಚಂದ್ರಚರಿತೆಯನ್ನು ಕೆತ್ತಿರುವನು. ಈತನ ರಾಮಾಯಣವು ವಿಭಿನ್ನ ಪಾತ್ರಗಳ ಕೂಟವಾಗಿದೆ. ಎಲ್ಲಾ ಪಾತ್ರಗಳು ಜೀವಂತವೂ ಆಕರ್ಷಕವೂ ಆಗಿದ್ದು ಜೈನಧರ್ಮದ ವಾತಾವರಣದಲ್ಲಿ ಉಸಿರಾಡುತ್ತವೆ. ಇದರಲ್ಲಿ ಬರುವ ಮನುಷ್ಯ, ರಾಕ್ಷಸ, ವಾನರ, ವಿದ್ಯಾಧರ ಮುಂತಾದ ಕುಲಗಳಿಗೆ ಸಂಬಂಧಿಸಿದ ಪಾತ್ರಗಳೆಲ್ಲವೂ ಜೈನಧರ್ಮದಲ್ಲಿ ನಂಬಿಕೆಯಿಟ್ಟು, ಜಿನನಲ್ಲಿ ಶ್ರದ್ಧೆಯಿಟ್ಟು ಜೀವನ ಸಂಗ್ರಾಮವನ್ನು ಎದುರಿಸುತ್ತವೆ. ಒಂದೊಂದು ಪಾತ್ರವೂ ತನ್ನದೇ ಆದ ಮೌಲ್ಯ ಪ್ರತಿಪಾದನೆಯ ಮೂಲಕ ಸಹೃದಯಿಗಳನ್ನು ಆವರಿಸಿಕೊಳ್ಳುತ್ತವೆ. ರಾಮನ ಧರ್ಮಶ್ರದ್ಧೆ, ಲಕ್ಷ್ಮಣನ ಕ್ಷಾತ್ರಗುಣ, ಸೀತೆಯ ಪತಿಭಕ್ತಿ, ರಾವಣನ ಉದಾತ್ತತೆ ಮತ್ತು ಛಲ, ವಾಲಿಯ ಜೈನಶ್ರದ್ಧೆ, ಜಾಂಬೂವಂತನ ಆಗಮಜ್ಞಾನ, ಹನುಮನ ಸ್ವಾಮಿಭಕ್ತಿ, ಕೈಕೆಯಿಯ ಮಾತ್ಸರ್ಯ, ವಿಭೀಷಣನ ವಿವೇಕ ಹೀಗೆ ಪ್ರತಿಯೊಂದು ಪಾತ್ರವೂ ಒಂದೊಂದು ಗುಣ,

ಸ್ವಭಾವವನ್ನು ತೆರೆದಿಡುತ್ತವೆ. ಆದ್ದರಿಂದ ನಾಗಚಂದ್ರನ ಮಾತುಗಾರಿಕೆ, ಮನುಷ್ಯ ಸ್ವಭಾವದ ಪರಿಚಯ, ಶ್ರೇಷ್ಠ ರೀತಿಯ ಪಾತ್ರ ಚಿತ್ರಣ ಇವುಗಳು ಉನ್ನತ ಮಟ್ಟದವು.

ಜೈನ ಸಾಹಿತ್ಯವು ತೀರ್ಥಂಕರರು, ಚಕ್ರವರ್ತಿಗಳು, ಬಲದೇವರು, ವಾಸುದೇವರು, ಪ್ರತಿವಾಸುದೇವರು ಹೀಗೆ ಐದು ಪ್ರಕಾರದ ನಾಯಕರನ್ನು ಗುರುತಿಸುತ್ತದೆ. ಇಲ್ಲಿ ಬಲದೇವರ ನಾಯಕ ಕಲ್ಪನೆ ಇನ್ನೂ ವಿಚಿತ್ರ. ಅವರು ನೇರವಾಗಿ ಕ್ರಿಯೆಯಲ್ಲಿ ತೊಡಗುವುದೇ ಇಲ್ಲ. ರಾಮ ಅಂತಹ ಬಲದೇವ. ರಾಮನ ಹೆಸರಿನಲ್ಲಿ ಯುದ್ಧವಾಗುತ್ತದೆ ನಿಜ. ಆದರೆ ಪ್ರತಿವಾಸುದೇವನಾದ ರಾವಣನನ್ನು ಆತ ಕೊಲ್ಲುವಂತಿಲ್ಲ. ಕವಿಗಳು ಬಾಯಿ ತುಂಬಾ ಆತನ ಪ್ರತಾಪಗಳನ್ನು ಹೊಗಳಿದರೂ ಆತ ಇಡೀ ಕಾವ್ಯದ ತುಂಬಾ ಮಾಡುವುದು: ಅಗತ್ಯವಿದ್ದಲ್ಲಿ ಹಾಜರಾಗುವುದು ಮತ್ತು ಮದುವೆಯಾಗುವುದು ಎರಡೇ ಕೆಲಸ. ಆತನಿಗಾಗಿ ಕ್ರಿಯೆಗಳನ್ನು ನೆರವೇರಿಸಿ ಕೊಡುವವನು ವಾಸುದೇವನಾದ ಲಕ್ಷ್ಮಣ. ಆದರೆ ಬಹುಮಾನ ಸಿಕ್ಕುವುದು ಮಾತ್ರ ರಾಮನಿಗೆ. ಇಂತಹ ರಾಮ ನಾಗಚಂದ್ರನ ಕಾವ್ಯದ ಕೇಂದ್ರ ಎನ್ನುವುದಕ್ಕೆ 'ಉದಾತ್ತ ರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು' (1-37), 'ರಘುವಂಶರಾಮಕಥೆ ಪೇಳ್ವನ್ಯಸಾಮಾನ್ಯಮೇ (1-38), 'ಅಪೂರ್ವಮೆನೆ ರಾಮಕಥೆಯನಭಿವರ್ಣಿಸುವೆಂ' ಎಂಬ ನಾಗಚಂದ್ರನ ಅಧಿಕೃತತೆ ಇದೆ. ಆದರೆ ಕಾವ್ಯದ ಉದ್ದಕ್ಕೂ ಕಾಣುವ ಕಾರ್ಯೋತ್ಸುಕತೆಯೂ ಪೌರುಷವು ಲಕ್ಷ್ಮಣನದು. ಲಕ್ಷ್ಮಣನು ಕಥಾನಾಯಕನಲ್ಲ. ಆದರೆ ಕಥೆಯ ಉದ್ದಕ್ಕೂ ಪಾತ್ರವಹಿಸಿದ್ದಾನೆ. ಇವನನ್ನು ಉಪನಾಯಕ ಅಥವಾ ಅನುನಾಯಕನೆಂದು ಹೇಳಬಹುದು.

ರಾಮ-ಲಕ್ಷ್ಮಣರ ಜನ್ಮದಾತೆಯರು ಬೇರೆ ಬೇರೆಯಾದರು ಜೀವನದುದ್ದಕ್ಕೂ ಬೆಳೆದು ಭವ್ಯವಾಗಿದ್ದು, ಆಳಿ ಅಳಿದದ್ದು ಮಾತ್ರ ಅಪೂರ್ವ ಅನುಬಂಧದ ಅವಳಿ ಜವಳಿಗಳಂತೆ. ರಾಮ-ಲಕ್ಷ್ಮಣರ ಸಂಗಡಿಗತನವು ಯುದ್ಧ ಪ್ರಸಂಗವಿರಲಿ, ಕಲ್ಯಾಣ ಮಹೋತ್ಸವವಿರಲಿ, ಭ್ರಾತೃತ್ವ ಭಾವ ಪ್ರಕಟದ ಸಂದರ್ಭವಿರಲಿ ಅವಿಚ್ಛಿನ್ನವಾಗಿ ಪ್ರಕಟಗೊಂಡಿದೆ. ರಾಮಲಕ್ಷ್ಮಣರು ದೃಷ್ಟಿಯನ್ನನುಸರಿಸುವ ಮನಸ್ಸಿನಂತೆಯೂ, ದೇಹವನ್ನನುಸರಿಸುವ ನೆಳಲಿನಂತೆಯೂ ಇದ್ದರು. ನಾಗಚಂದ್ರನ ಲಕ್ಷ್ಮಣನು ರಾಮನಿಗಾಗುವ ಅನ್ಯಾಯವನ್ನು ಸಹಿಲಾರ. ತನ್ನ ಕುಲದ ಬಗ್ಗೆ ಅತ್ಯಭಿಮಾನಿಯಾದ ಈತನು ತನ್ನ ನೆಲದ ಮೇಲೆ ಧಾಳಿ ಮಾಡಬಯಸಿದವರ ಸದ್ದಡಗಿಸುವನು. ವಾಸುದೇವನಾಗಿ ಪ್ರತಿವಾಸುದೇವನಾದ ರಾವಣನ ಸಂಹಾರ ಮಾಡುವನು. ರಾಮನು ಪಿತೃವಚನ ಪರಿಪಾಲಕನೆನಿಸಿಕೊಂಡರೆ ನಾಗಚಂದ್ರನ ಲಕ್ಷ್ಮಣನು ಮಾತೃ ವಚನ ಪರಿಪಾಲಕ ಎನಿಸಿಕೊಳ್ಳುವನು. ಸೀತೆಯಲ್ಲಿ ಮಾತೆಯನ್ನು ಕಂಡ ಲಕ್ಷ್ಮಣನು ಆಕೆಯನ್ನು ಅಡವಿಗಟ್ಟುವ ರಾಮನ ನಿಷ್ಕುರುಣೆಯ ನಿರ್ಧಾರವನ್ನು ಪ್ರತಿರೋಧಿಸುವ ಮೂಲಕ ಅಣ್ಣನ ಮಾತಿನ ಅಂಧಾನುಪಾಲಕನಲ್ಲ ವಿವೇಚನೆಯುಳ್ಳವನು ಎಂಬಂತೆ ನಡೆದುಕೊಂಡನು. ಲವಕುಶರ ಎದುರು ತನ್ನ ಸಾಮರ್ಥ್ಯದ ಸೋಲನ್ನು ಸಂತೋಷದಿಂದ ಒಪ್ಪಿಕೊಂಡು ಅವರನ್ನು ಮುಕ್ತ ಮನಸ್ಸಿನಿಂದ ಅಭಿನಂದಿಸುವ ವೀರಗುಣವುಳ್ಳವನೂ ಹೌದು.

'ರಾಮಚಂದ್ರಚರಿತ ಪುರಾಣಂ' ಕಾವ್ಯದ ಉದ್ದಕ್ಕೂ ಬರುವ ಯುದ್ಧ ಪ್ರಸಂಗಗಳಲ್ಲಿ ಅತಿಯಾದ ಕ್ರೌರ್ಯ ಮತ್ತು ಹಿಂಸೆ ಕಾಣುವುದಿಲ್ಲ. ಬಹುತೇಕ ಕಾಳಗಗಳಲ್ಲಿ ಶತ್ರು ನಾಯಕರು ಹತರಾಗುವುದಿಲ್ಲ, ಶರಣಾಗತನಾಗುವರು. ಸೋತ ದೊರೆಗಳು ಯುದ್ಧ ಮತ್ತು ರಾಜ ಪಟ್ಟದಿಂದ ವಿಮುಖರಾಗಿ ಜಿನ ದೀಕ್ಷೆಗೊಂಡು ತಪೋಮುಖಿಯಾಗುವರು. ಹೀಗೆ ಯುದ್ಧಗಳು ಹಿಂಸೆಯ ತುದಿಯಿಂದ ಆರಂಭವಾಗಿ ಅಹಿಂಸೆಯ ಶಿಖರವನ್ನೇರುವವು. ಇಂತಹ ಯುದ್ಧ ಪ್ರಸಂಗಗಳಲ್ಲಿ ಲಕ್ಷ್ಮಣನ ಉಗ್ರ ಕೋಪವನ್ನು ನಿಯಂತ್ರಿಸಿ ಪ್ರಯೋಗಿಸುವ ಸುರಕ್ಷಾ ಕವಾಟದಂತೆ ರಾಮನ ಹಿತಕೋಪ ಮತ್ತು ನಡೆ-ನುಡಿಯು ಕಾಣುತ್ತವೆ. ಬೇಡ ದೊರೆ ತರಂಗತಮನು ಮಿಥಿಳೆಯನ್ನು ಆಕ್ರಮಿಸಿ ಜನಕನನ್ನು ಮುತ್ತಿ, ಕನಕನನ್ನು ಹಿಡಿದು ಕಟ್ಟಿ, ಲಕ್ಷ್ಮಣನ ರಥ ಮುರಿದಿರಲು 'ಲೋಕಸಂಹಾರ ಮಾಳ್ಪ ಕೃತಾಂತನುತೆ ರಘುಜಂ ಕೊಂಡಂ ಧನುರ್ದಂಡಮ್'. ಆಗ ದಶರಥರಾಮನ 'ಬಿಲ್ದೆಗೆದೆಸೆ' ಶಬರ ನಾಯಕರು ಮಡಿದರು. ಆ 'ಸಮಯದೊಳ್ ಲಕ್ಷ್ಮಣಂ ಲಯ ಸಮಯಸಮುತ್ಪಾದನಾ ಸಮಗ್ರ ವೀರಾಗ್ರವೇಶ'ದಿಂದ ತನ್ನ ತೋಳ್ಬಲದಿಂದಲೇ ವೈರಿಗಳನ್ನು ಎದುರಿಸಿ ಸಂಹರಿಸಿದನು. ಸೀತಾ ಸ್ವಯಂವರದ ಸಂದರ್ಭದಲ್ಲಿ ಇಂಧುಗತಿರಾಜನು ಪರೀಕ್ಷೆಗಿಟ್ಟ ವಜ್ರಾವರ್ತ ಸಾಗರಾವರ್ತ ಚಾಪಗಳು ಕಾಳಸರ್ಪ ರೂಪದಲ್ಲಿ ಅಗ್ನಿಜ್ವಾಲೆ ಸೂಸಲು ನೆರೆದ ಬಿಲ್ಲುಗಾರರು ಹಿಂದೆ ಸರಿದರು. ಆದರೆ ರಘುರಾಮನು ಆ ವಿಷಮ ವಜ್ರಾವರ್ತ ಕೋದಂಡವನ್ನು ಔಡಲಕಟ್ಟಿಗೆಯಂತೆ ಸಲೀಲವಾಗಿ ಏರಿಸಿ ಖೇಚರರ ಬಲವಡಗಿಸಿದನು. ಇದೇ ವೇಳೆ ಬಲರಾಮನಿಗೆ ಬೆಂಬಲವಾಗಿ 'ಆಕಾರಮಲ್ತು ವಜ್ರಪ್ರಕಾರಮಿದೆನಿಸಿ' ಬಂದ ಲಕ್ಷ್ಮಣನು ಸಾಗರಾವರ್ತ ಚಾಪವನ್ನು ಹೂವಿನಂತೆ ಎತ್ತಿ ವೀರತ್ವ ಪ್ರದರ್ಶಿಸಿದನು. ತಂದೆ ದಶರಥನು ರಾಮನಿಗೆ ಕಟ್ಟಲು ನಿಶ್ಚಯಿಸಿದ್ದ ರಾಜಪಟ್ಟವನ್ನು ಕೈಕೆಯಿಯು ಪುತ್ರ ವ್ಯಾಮೋಹದಿಂದ ಭರತನಿಗೆ ಪಡೆಯುವಲ್ಲಿ ಯಶಸ್ವಾಗಲು ಲಕ್ಷ್ಮಣನ ಆವೇಶವು ಕಟ್ಟೆಯೊಡೆದು ಭರತ ಮತ್ತು ಚಿಕ್ಕಮ್ಮನ ಮೇಲೆ ಅಪ್ಪಳಿಸಲು ಅನುವಾಯಿತು. ಆದರೆ, ರಾಮನ ಕಣ್ಸನ್ನೆ ಆತನ ಕೋಪವನ್ನು ನಿಯಂತ್ರಿಸಿತು.

ವನವಾಸದುದ್ದಕ್ಕೂ ಯುದ್ಧ ಸನ್ನಿವೇಶಗಳು ನಿಯಮಿತವಾಗಿ ಅವರ್ತವಾಗಿವೆ. ಇಲ್ಲಿ ಲಕ್ಷ್ಮಣನ ಕ್ಷಾತ್ರತನ ಮತ್ತೆ ಮತ್ತೆ ಬೆಳಗಲ್ಪಡುತ್ತದೆ. ದಶಪುರದ ರಾಜ ವಜ್ರಕರ್ಣನನ್ನು ಸಿಂಹೋದರನಿಂದ ಕಾಪಾಡುವಲ್ಲಿ, ರೌದ್ರಭೂತಿಯನ್ನು ಮಣಿಸಿ ವಾಲಖಿಲ್ಯವನ್ನು ರಕ್ಷಿಸುವಲ್ಲಿ, ಭರತನ ಮೇಲೆ ಯುದ್ಧಸಾರಿದ್ದ ಅತಿವೀರ್ಯನನ್ನು ಏಕಾಂಗಿಯಾಗಿ ಗೆದ್ದು ರಾಮಪಾದಕ್ಕೊಪ್ಪಿಸುವಲ್ಲಿ, ಖರದೂಷಣರನ್ನು ಗೆಲ್ಲುವಲ್ಲಿ ಲಕ್ಷ್ಮಣನ ಪ್ರತಾಪವು ರಾಮನನ್ನು ನೇಪಥ್ಯಕ್ಕೆ ಸರಿಸುವಂತಿವೆ.

ಸೀತೆಯನ್ನು ಅಪಹರಿಸಿದವನು ರಾವಣನೆಂಬ ಖಚಿತತೆ ದೊರೆಯಲು ಜಾಂಬವಂತನು ಅವನು 'ಭುಜಬಲದ ವಿದ್ಯಾಬಲದ ಮನೋಬಲದ ಬಲ್ಪಿನಿಂದ ನೃಪರಾರ್ಗಂ ಗೆಲಲರಿಯಂ' (10-231) ಎಂದು ರಾಮರಿಗೆ ಪರಿಚಯಿಸಿದನು. ರಾವಣನ ಪ್ರತಾಪದ ವರ್ಣನೆಯಿಂದ ಸ್ವಲ್ಪವೂ ಅಳುಕದ ಲಕ್ಷ್ಮಣನು, 'ಧನುಜೇಂದ್ರನ್ ಅಲ್ಪ ವೀರ್ಯಂ ಮನುಜೇಂದ್ರನ್ ಅನಂತ ವೀರ್ಯನ್' (10-234) ಎಂದು ಬಲರಾಮನ ತೋಳ್ಬಲ, ಚಾಪಬಲ ಮತ್ತು ಕ್ಷಮಾಬಲಗಳ ವೀರಧ್ವನಿ ಮೊಳಗಿಸಿದನು. ಆಗ ರಾಮನು

ರಾವಣ ಸಂಹಾರಕ್ಕಾಗಿ ಅನ್ಯ ಬೆಂಬಲ ಪಡೆಯ ಸಂಘಟನೆಗಿಂತ ತಮ್ಮ ಲಕ್ಷ್ಮಣನ ತೋಳ್ಬಲವನ್ನು ಮುಂದಿಟ್ಟನು. ಬಳಿಕ ಲಕ್ಷ್ಮಣನು 'ಸಿದ್ಧಶೈಲ'ವನ್ನು ಎತ್ತಿ ತಾನು ರಾವಣ ಸಂಹಾರಕ್ಕಾಗಿಯೇ ಜನಿಸಿದವನು ಎಂಬುದನ್ನು ಖಚಿತಪಡಿಸಿದನು. ಇಲ್ಲಿ ಸೀತೆಯನ್ನು ರಕ್ಷಿಸುವಲ್ಲಿ, ದುಷ್ಟರನ್ನು ಶಿಕ್ಷಿಸುವಲ್ಲಿ ಯಾವುದೇ ಮುಲಾಜಿಗೆ ಅಳುಕುವುದಿಲ್ಲ ಎಂದುದಕ್ಕೆ ಲಕ್ಷ್ಮಣನ ವೀರನುಡಿಗಳು ಸಾಕ್ಷಿಯಾಗಿವೆ. ಆತನ ತೋಳ್ಬಲದ ಮೇಲೆ ರಾಮನಿಗಿರುವ ನಂಬಿಕೆಯನ್ನು ದೃಢಪಡಿಸುತ್ತವೆ. ಹೀಗೆ ಕಾವ್ಯವನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ರಾಮನು ಪ್ರೇರಕ ಸ್ಫೂರ್ತಿಯಾದರೆ ಲಕ್ಷ್ಮಣನು ಕಾರಕ ಚೈತನ್ಯ; ರಾಮನು ಮೂಲಮೂರ್ತಿಯಾದರೆ ಲಕ್ಷ್ಮಣನು ಉತ್ಸವಮೂರ್ತಿ. ಇಬ್ಬರೂ ಗೌರವಕ್ಕೆ ಪಾತ್ರರು ಎಂಬ ಅನಿಸಿಕೆ ಮೂಡುತ್ತದೆ.

ದಂಡಾರಣ್ಯದಲ್ಲಿ 'ಸೂರ್ಯಹಾಸ' ಖಡ್ಗಕ್ಕಾಗಿ ಶಂಭೂಕನು ತಪದಲ್ಲಿರಲು ಆತನ ಸುತ್ತಲು ಬಿದಿರುಮೆಳೆ ಆವರಿಸಿಕೊಂಡು ಕಾಣದಾಗಿದ್ದನು. ಆಕಸ್ಮಿಕವಾಗಿ ಅತ್ತಕಡೆ ಬಂದ ಲಕ್ಷ್ಮಣನು ಶಂಭೂಕನಿಗೆ ಅನುಗ್ರಹಗೊಂಡ ಸೂರ್ಯಹಾಸವನ್ನು ಪರೀಕ್ಷಾರ್ಥವಾಗಿ ಬಿದಿರುಮೆಳೆಯತ್ತ ಪ್ರಯೋಗಿಸಲು ಬಿದಿರಿನೊಂದಿಗೆ ಆತನ ರುಂಡವು ಕತ್ತರಿಸಿ ಬಿದ್ದಿತು. ಈ ಅಚಾತುರ್ಯಕ್ಕೆ ಲಕ್ಷ್ಮಣನು ವ್ಯಥೆಗೊಂಡನು. ನಿರಪರಾಧಿಯನ್ನು ಕೊಂದದಕ್ಕೆ ಪಾಪಪ್ರಜ್ಞೆ ಕಾಡಿತು. ರಾಮನಸೀತೆಯರ ಮಾತುಗಳಿಂದ ಲಕ್ಷ್ಮಣನು ಸಮಚಿತ್ತಗೊಂಡನು. ಹೀಗೆ ಅವನು ಕರುಣೆ ಮತ್ತು ಪಾಪಪ್ರಜ್ಞೆಯುಳ್ಳವನು ಎಂಬುದಕ್ಕೆ ಸಾಕ್ಷಿಯಾಯಿತು.

ಸೀತೆಯ ಮೇಲೆ ಜನರ ಅಪವಾದ ದಾಖಲಾಗಲು ರಾಮನು 'ಯಶಸ್ಸು ಧರ್ಮವೂ ಅಳಿಯುವಲ್ಲಿ ಸೀತೆಯನ್ನು ತೊರೆಯಲು ಯೋಚಿಸಿದನು' (ಜಸಮುಂ ಧರ್ಮಮುಂ ಅಳಿವಂದು ಎಸಗುವುದೇಳಿಕೆಯೆಂದು ವೈದೇಹಿಯುಮಂ ಬಿಡುಸಲ್ ಬಗೆದಂ (15-68). 'ಎನ್ನ ಪೌರುಷಂ ದೊರೆಗಿಡದೇ' (15-70) ಎಂದು ಆಲೋಚಿಸಿದನು. 'ಪಳಿಯಕ್ಕೆ ಪಾಪಮಕ್ಕೆ' (15-73) ಅಡವಿಗೆ ಕಳುಹಿಸುವೆನು ಎಂದು ಕಟುನಿರ್ಧಾರಕ್ಕೆ ಬಂದನು. ಆಗ ಲಕ್ಷ್ಮಣನು ಅತ್ಯಂತ ಕುಪಿತನಾಗಿ ರಾಮನ ಅವಿವೇಕವನ್ನು ವಿರೋಧಿಸಿದನು. ಸೀತೆಯ ಶೀಲ ಶಂಕಿಸಿ 'ಈ ಪೊಲ್ಲವಾತಂ ಪೆರಪಿದ ಒಕ್ಕಲಿಗನ ನಾಲಗೆಯಂ ಕೀಳ್ತಿಕ್ಕುವೆನ್' ಎಂದು ರೋಷಗೊಂಡನು. ರಾಮನ ಆಜ್ಞೆ ಮತ್ತು ವಿನಂತಿಯನ್ನು ಪ್ರತಿರೋಧಿಸಿ, 'ಜನಕರಾಯನ ಮಗಳು ಅತ್ಯಂತ ಮಹಾಸತಿ, ಪಾಪಭೀರು, ಗರ್ಭಿಣಿ. ಅಡವಿ ಅತ್ಯಂತ ರೌದ್ರ, ಅಂಜಿಕೆಯಿಲ್ಲದೆ ಅಲ್ಲಿ ಪಾತಕಗಳು ನಡೆಯುತ್ತವೆ ಎಂಬುದನ್ನು ನೆನೆಯದೆ, ಅನ್ಯರು ಬಾಯಿಗೆ ಬಂದ ಹಾಗೆ ಮಾತಾಡಿದ್ದನ್ನು ಕೇಳಿ ಹೀಗೆ ನಿಷ್ಕರುಣೆಯಿಂದ ಬಿಟ್ಟುಬಿಡೆಂದು ಕಠೋರವಾಗಿ ನುಡಿಯಬಹುದೇ?' (15-72) ಎಂದು ನೊಂದು ನುಡಿದು ಉದ್ವೇಗಗೊಂಡು ಸಭೆಯಿಂದ ಹೊರನಡೆದನು. ರಾಮನಲ್ಲಿ ಅಧಿಕಾರ, ಧರ್ಮಪಾಲನೆ, ವಂಶಗೌರವದ ಪ್ರತಿಷ್ಠೆಗಳೇ ಆದ್ಯವಾಗಲು ಆತನಲ್ಲಿ ಮಾನವೀಯತೆ ನೆಲೆಕಳೆದುಕೊಂಡಿತು. ಸೀತೆಯ ಮೇಲಿನ ಆಪಾದನೆಯನ್ನು ವಿಚಾರಿಸುವ ಸೌಜನ್ಯ ತೋರದೆ, ಆಕೆ ಒಂದು ಹೆಣ್ಣು, ತನ್ನ ಪತ್ನಿ ಎಂಬ ಕಾಳಜಿಯೂ ಇಲ್ಲದೆ ನಿಷ್ಕರುಣೆಯಿಂದ ಕಠೋರ ನಿರ್ಧಾರಕ್ಕೆ ಬರುವ ರಾಮನ ನಾಯಕತನಕ್ಕೆ ಕುಂದು ಉಂಟಾಯಿತು. ರಾಮನ ನಿರ್ಧಾರವನ್ನು ಪ್ರತಿರೋಧಿಸುವ, ತಾರ್ಕಿಕವಾಗಿ ವಿಶ್ಲೇಷಿಸುವ ಪ್ರಬುದ್ಧತೆಯೊಂದಿಗೆ ಅನ್ಯಾಯಕ್ಕೊಳಗಾದವರ ಧ್ವನಿಯಾಗುವ

ಕಾಳಜಿಯ ಗುಣಗಳು ಲಕ್ಷ್ಮಣನಲ್ಲಿ ಕಂಡುಬಂದವು. ಅಲ್ಲದೆ, ಸೀತೆಯನ್ನು 'ರಾಮಪತ್ನಿ' ಎನ್ನುವುದಕ್ಕಿಂತ 'ಜನಕರಾಯನ ಮಗಳು' ಎಂದು ಸಂಬೋಧಿಸುವಲ್ಲಿ ಲಕ್ಷ್ಮಣನ ಆಕ್ಷೇಪಣೆಯು ದಾಖಲಾಗುವುದನ್ನೂ ಕಾಣುತ್ತೇವೆ. ಹೀಗೆ ಲಕ್ಷ್ಮಣನು, ತಾನು ರಾಮನ ಅಂಧ ಅನುಪಾಲಕನಲ್ಲ. ಅನ್ಯಾಯವಾದಲ್ಲಿ ರಾಮನನ್ನೂ ಪ್ರಶ್ನಿಸಬಲ್ಲೆನು ಎಂಬುದನ್ನು ತೋರಿಸಿ ತನ್ನ ತನವನ್ನು ಕಾವ್ಯದಲ್ಲಿ ಉಳಿಸಿಕೊಂಡಿದ್ದಾನೆ. ಆದರೆ ಸೀತಾತ್ಯಾಗವನ್ನು ವಿರೋಧಿಸುವ ಹೊರತಾಗಿ ತಪ್ಪಿಸುವ ಅವಕಾಶ ಲಕ್ಷ್ಮಣನಿಗೆ ಸಾಧ್ಯವಾಗಲಿಲ್ಲ. ಇದಕ್ಕೆ ಅಂದಿನ ರಾಜಕೀಯ ಕಾರಣವಿರಬಹುದು ಎನಿಸುತ್ತದೆ.

ವಿಧಿಯ ಪರೀಕ್ಷಾರ್ಥದಲ್ಲಿ ಮೃತಸ್ಥಿತಿಯಲ್ಲಿರುವ ರಾಮನ ಗೊಂಬೆಯನ್ನು ಕಂಡು ಲಕ್ಷ್ಮಣನ ಪ್ರಾಣವೇ ನಿಲ್ಲದಾಯಿತು. ಆಗ ದಿಟ ರಾಮನು ಲಕ್ಷ್ಮಣನ ವಿಯೋಗವನ್ನು ಸಹಿಸದಾದನು. ಮರಣೋತ್ತರ ಕಾರ್ಯಗಳಿಗೆ ಅವಕಾಶ ಕೊಡದೆ ಲಕ್ಷ್ಮಣನ ಮೃತಶರೀರವನ್ನು ಹೊತ್ತು ಆರು ತಿಂಗಳು ಅಲೆದಾಡಿದನು. ಆ ಬಳಿಕ ಜಿನ ಭಟ್ಟಾರಕರ ತಿಳಿವಳಿಕೆಯ ಮಾತುಗಳಿಂದ ಅರಿವುಗೊಂಡು ಆ ದೇಹಕ್ಕೆ ಮುಕ್ತಿಕಾರ್ಯ ಮಾಡಿದನು. ಇದು ರಾಮನ ಭ್ರಾತೃತ್ವ ಪ್ರೇಮಕ್ಕಿಂತ ಹಿರಿದಾಗಿ ಈರ್ವರ ಅನೋನ್ಯತೆ ಮತ್ತು ಪರಸ್ಪರಾವಲಂಬನೆಯನ್ನು ಸಾಕ್ಷೀಕರಿಸುತ್ತದೆ. ಅಂದರೆ, ರಾಮನ ಜೀವನದುದ್ದಕ್ಕೂ ಲಕ್ಷ್ಮಣನು ಅತಿ ಸಮೀಪಾವರ್ತಿಯಾಗಿದ್ದನು. ಅದು ರಾಮನ ಯುದ್ಧ, ವಿವಾಹ, ವನವಾಸ, ವಿಜೃಂಭಣೆ ಮಾತ್ರವಲ್ಲದೆ ವಿರಹ-ವಿಯೋಗಗಳ ಸನ್ನಿವೇಶದಲ್ಲೂ ಲಕ್ಷ್ಮಣನೇ ಜೊತೆಗಿದ್ದನು. ಆದ್ದರಿಂದ ಲಕ್ಷ್ಮಣನಿಲ್ಲದ ಶೂನ್ಯತೆಯನ್ನು ರಾಮನಿಗೆ ಸಹಿಸಕೊಳ್ಳಲಾಗದೆ ಚಿತ್ತಭ್ರಮಣೆಗೊಂಡನು.

ಹೀಗೆ ರಾಮಕಥೆಯನ್ನು ಲಕ್ಷ್ಮಣನೇ ಆವರಿಸಿಕೊಳ್ಳುವಂತೆ ಮಾಡುವಲ್ಲಿ ನಾಗಚಂದ್ರನ ಮೇಲೆ ಜೈನ ರಾಮಾಯಣ ಪರಂಪರೆಯೊಂದಿಗೆ ಸ್ಥಳೀಯ ಜನಪದ ರಾಮಾಯಣಗಳ ಪ್ರಭಾವವೂ ಕಾಣಿಸುತ್ತದೆ. ಏಕೆಂದರೆ, ಮಧ್ಯಭಾರತ ಮತ್ತು ಈಶಾನ್ಯ ಭಾರತದ ಬಹುತೇಕ ಬುಡಕಟ್ಟುಗಳ ರಾಮಾಯಣಗಳಲ್ಲಿ ಲಕ್ಷ್ಮಣನ ಸಾಹಸವೇ ಬಹುದೊಡ್ಡದು. ಅನೇಕ ಭಾಗಗಳಲ್ಲಿ ಲಕ್ಷ್ಮಣನು ದಾನವರ ಜೊತೆ ಹೋರಾಡುವ ರಂಗುರಂಗಿನ ಕಥೆಗಳಿವೆ. ಈ ದೃಷ್ಟಿಯಿಂದ ಬುಡಕಟ್ಟು ರಾಮಾಯಣಗಳಲ್ಲೆಲ್ಲ ಲಕ್ಷ್ಮಣನೇ ನಿಜವಾದ ಹೀರೋ. ಈಶಾನ್ಯ ಭಾರತದ ಮಕ್ಕಳಿಗೆ ಆಕಾಶದಲ್ಲಿ ಕಾಮನಬಿಲ್ಲು ಎದ್ದರೆ ಅದು ಲಕ್ಷ್ಮಣನ ಧನಸ್ಸು ಎಂಬ ನಂಬಿಕೆ. ಅಲ್ಲದೆ, ಮಧ್ಯ ಪ್ರದೇಶದ ಗೊಂಡರು ಹೇಗೆ ಲಕ್ಷ್ಮಣನನ್ನು ನಾಯಕನನ್ನಾಗಿ ಕಾಣುತ್ತಾರೋ ಹಾಗೇ ಕರ್ನಾಟಕದ ಸಹ್ಯಾದ್ರಿಯ ಗೊಂಡರಿಗೆ ಕೂಡ ಲಕ್ಷ್ಮಣನೇ ಮುಖ್ಯ ವ್ಯಕ್ತಿ. ನೇಮ, ನಿಯಮ, ತಪಸ್ಸು ಮತ್ತು ಸಾತ್ವಿಕತೆ ಎಲ್ಲದರಲ್ಲಿಯೂ ರಾಮನಿಗಿಂತ ಲಕ್ಷ್ಮಣನೇ ಮುಂದು. ಇಂತಹ ಬುಡಕಟ್ಟು ಅಥವಾ ಜನಪದ ರಾಮಾಯಣಗಳು ನಾಗಚಂದ್ರನ ಕಾಲದಲ್ಲಿ ಜನಜನಿತವಾಗಿದ್ದು ಅದರಿಂದಲೂ ಸಹ ಪ್ರಭಾವಿಸಲ್ಪಟ್ಟು ಲಕ್ಷ್ಮಣನ ಪಾತ್ರವನ್ನು ನಾಯಕನಂತೆ ಚಿತ್ರಿಸಿರುವ ಸಾಧ್ಯತೆಯು ದಟ್ಟವಾಗಿದೆ.

ಒಟ್ಟಾರೆ, ಗರುಡ ಮಣಿಯ ಬಳಿಯ ಹಾವಿನಂತೆ ಅಲುಗದೆ ನಿಷ್ಠನಾಗಿ ಅಣ್ಣನ

ಕೆಲಸದಲ್ಲಿ ಲಕ್ಷ್ಮಣನಿದ್ದನು. ಆದರೂ ವಂಶಗೌರವ ರಕ್ಷಿಸುವಲ್ಲಿ, ಭ್ರಾತೃತ್ವದಲ್ಲಿ ಹಾಗೂ ಕ್ಷಾತ್ರಗುಣದಲ್ಲಿ ಲಕ್ಷ್ಮಣನು ಒಂದು ಮಾದರಿಯೇ ಆಗಿದ್ದಾನೆ. ಕೇವಲ ರಾಮನ ಆಜ್ಞಾವರ್ತಿಯಾಗಿರದೆ ಸಂದರ್ಭಾನುಸಾರ ತರ್ಕಿಸುವ, ಪ್ರಶ್ನಿಸುವ ಮತ್ತು ಪ್ರತಿರೋಧಿಸುವ ವಿವೇಚನೆಯೂ ಲಕ್ಷ್ಮಣನಲ್ಲಿ ಕಂಡುಬರುತ್ತದೆ. ವೀರಾವೇಶವು ಸದಾ ಶಿಖರ ಮುಖಿಯಾಗಿರುವಂತೆ ಸಂತಾಪ-ಸಮಾದಾನ ಮತ್ತು ಪಾಪಪ್ರಜ್ಞೆಗಳು ಸಮಪಾತಳಿಯಲ್ಲಿ ಅಭಿವ್ಯಕ್ತಗೊಂಡಿವೆ. ಆದ್ದರಿಂದ, ನಾಗಚಂದ್ರನ ಪಂಪರಾಮಾಯಣವು ಜೈನ ಪರಿಕಲ್ಪನೆಯಂತೆ 'ವಾಸುದೇವ-ಪ್ರತಿವಾಸುದೇವ' ಕೇಂದ್ರಿತವಾಗಿರುವುದರಿಂದ ಇದು ರಾಮ-ಲಕ್ಷ್ಮಣರ ನಾಯಕತ್ವದ, ರಾವಣನ ಪ್ರತಿನಾಯಕತ್ವದ ಗುಣಾವಗುಣಗಳನ್ನು ಮಥಿಸುವ ಕಥೆಯಂತೆ ಕಾಣುತ್ತದೆ. ಇದನ್ನು ಕಥೆಯ ಸನ್ನಿವೇಶಗಳು ಪುರಾವೆಗೊಳಿಸುತ್ತವೆ. ಹೀಗೆ, ರಾಮಕಥೆಯ ಪ್ರಭಾವಲಯದಲ್ಲಿ ಲಕ್ಷ್ಮಣನು ಪ್ರಕಾಶಿಸುತ್ತಿದ್ದಾನೆ.

'ಲಕ್ಷ್ಮಣತ್ವ' ಎಂಬುದನ್ನು ಒಂದು ಮಾದರಿಯಾಗಿಸಿಕೊಂಡು ವಿವೇಚಿಸಿದಾಗ ಇಂದಿನ ಯುವಶಕ್ತಿಯಲ್ಲಿ ನಾಗಚಂದ್ರನ 'ಲಕ್ಷ್ಮಣ'ನನ್ನು ಕಾಣಬಹುದು. ಅಂದರೆ, ಲಕ್ಷ್ಮಣನಂತೆ ಅತೀವ್ರವಾದ ಶಕ್ತಿ-ಸಾಮರ್ಥ್ಯ, ಕೋಪಾವೇಶ, ತನ್ನವರ ರಕ್ಷಣೆಗಾಗಿ ಸದಾ ಎಚ್ಚರತನ, ಹಿರಿಯರ ಮಾತಿನ ಅನುಪಾಲನಾ ಗುಣಗಳು ಇಂದಿನ ಯುವಸಮುದಾಯದಲ್ಲಿ ಸಹಜವಾಗಿವೆ. ಆದರೆ ಇಂದಿನ ಧರ್ಮರಾಜಕಾರಣ ಮತ್ತು ಏಕಧರ್ಮ ಶ್ರೇಷ್ಠತೆಯ ಚಿಂತನೆ ಹಾಗೂ ನಾವು 'ಅಸುರಕ್ಷಿತರು' ಎಂಬ ಕಲ್ಪಿತ ಭಯಗಳನ್ನು ಹುಟ್ಟುಹಾಕಿದೆ. ಈ ಕಲ್ಪಿತ ಭಯಗಳಲ್ಲಿ ಸಿಲುಕಿಸಿರುವ ಯುವಜನತೆಯನ್ನು 'ಧರ್ಮ ಮತ್ತು ದೇಶರಕ್ಷಣೆ'ಗಳ ಹೆಸರಿನಲ್ಲಿ ಅವರ 'ಲಕ್ಷ್ಮಣಶಕ್ತಿ'ಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎನಿಸುತ್ತದೆ. ಆದ್ದರಿಂದ ಲಕ್ಷ್ಮಣಶಕ್ತಿಯನ್ನು ನಿಯಂತ್ರಿಸಿ ಪ್ರಯೋಗಿಸುವ, ರಕ್ಷಾಕವಾಟದಂತಿದ್ದು ಆ ಶಕ್ತಿಯನ್ನು ಸದುಪಯೋಗಿಸುವ ಪ್ರಾಮಾಣಿಕತನದ ರಾಮಶಕ್ತಿಯ ತುರ್ತು ಇದೆ. ಆಗ ಮಾತ್ರ ಸಮತೋಲಿತ ಸಮಾಜ ಕಟ್ಟುವ, ಎಲ್ಲರೂ ಬದುಕುವ, ಜೀವಪರ ಕಾಳಜಿಯ ತಾಳ್ಮೆ ಮತ್ತು ಕ್ಷಾತ್ರ ಸಮನ್ವಯದ ರಾಮ-ಲಕ್ಷ್ಮಣ ರಾಜ್ಯವನ್ನು ಕಟ್ಟುವ ಕನಸು ಸಕಾರವಾದಿತು ಎನಿಸುತ್ತದೆ.

## ಪರಾಮರ್ಶನಾ ಗ್ರಂಥಗಳು:


1. ಹಿರೇಮಠ ಆರ್. ಸಿ. (1975). ನಾಗಚಂದ್ರ ವಿರಚಿತ ರಾಮಚಂದ್ರ ಚರಿತ ಪುರಾಣಂ. ಭಾರತೀಯ ಜ್ಞಾನಪೀಠ ಪ್ರಕಾಶನ. ನವದೆಹಲಿ.
2. ಶೆಟ್ಟಿ ಎಸ್. ಡಿ. (2017). ಕವಿ ನಾಗಚಂದ್ರ ಮತ್ತು ಆತನ ಕೃತಿಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
3. ನಾರಾಯಣ ಪಿ. ವಿ. (2013). ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ-4: ಚಂಪೂ ಕವಿಗಳು. ಸ್ವಪ್ನಬುಕ್ ಹೌಸ್. ಬೆಂಗಳೂರು.
4. ನಾಗರಾಜಯ್ಯ ಹಂಪ (ಸಂ). (1985) ದಿವ್ಯಧ್ವನಿ. ರವಿ ಪ್ರಿಂಟರ್ಸ್. ಬೆಂಗಳೂರು.
5. ಶೇಷಗಿರಿರಾವ್ ಡಿ. ವಿ. (1974). ಕವಿ ನಾಗಚಂದ್ರ. ಕನ್ನಡ ಕಿವಿ-ಕೃತಿಮಾಲೆ, ಸಮಾಜ ಪುಸ್ತಕಾಲಯ ಪ್ರಕಟಣೆ. ಧಾರವಾಡ.
6. ಕನ್ನಡ ಸಾಹಿತ್ಯ ಪರಿಷತ್ತು. (1921). ಪಂಪ ರಾಮಾಯಣ ಎಂಬ ರಾಮಚಂದ್ರಚರಿತ ಪುರಾಣಂ. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
7. ರೈಸ್ ಬಿ. ಎಲ್. (1892). ಅಭಿನವಪಂಪನೆಂಬ ನಾಗಚಂದ್ರ ಕೃತ ರಾಮಚಂದ್ರಚರಿತ ಪುರಾಣಂ. ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್. ಬೆಂಗಳೂರು.
8. ಶ್ರೀನಿವಾಸ ಹಾವನೂರ (ಸಂ). (2007). ಪಂಪ ರಾಮಾಯಣ ಗದ್ಯ ಕಥಾನಕ. ಕಲಾಗಂಗೋತ್ರಿ ಯಕ್ಷಗಾನ ಕೇಂದ್ರ. ಸೋಮೇಶ್ವರ, ಉಚಿಲ.
9. ಮುಗಳಿ ರಂ. ಶ್ರೀ. (2014). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
10. ಶಿವರುದ್ರಪ್ಪ ಜಿ. ಎಸ್. (ಸಂ). (1975). ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂಪುಟ-2. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.
11. ಮಂಜುನಾಥ ಬೇವಿನಕಟ್ಟಿ (ಸಂ). (2015). ರಾಮಾಯಣ: ಮರುದರ್ಶನ: ಶಬ್ದಪಾರಮಾರ್ಗಮಶಕ್ಯಂ. ಪ್ರಸಾರಾಂಗ, ದಾವಣಗೆರೆ ವಿಶ್ವವಿದ್ಯಾಲಯ. ದಾವಣಗೆರೆ.
12. Singh K. S. & Birendra Nath Datta. (1993). Ramakata in Tribal and Folk Traditions of India. Anthropological Survey of India. Calcutta.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.